


International Journal of Kannada Research
www.kannadajournal.com

**ISSN: 2454–5813**
IJKR 2024; 10(1): 38-43
© 2024 IJKR
www.kannadajournal.com
Received: 16-12-2023
Accepted: 19-01-2024

**ಡಾ. ಜಗದೀಶ್ ಎಂ ವಿ**
ಗ್ರಂಥಪಾಲಕರು, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಕರ್ನಾಟಕ, ಭಾರತ

**ಡಾ. ಜಯಕುಮಾರ**
ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಲ್ಲಹಳ್ಳಿ, ನಂಜನಗೂಡು ತಾ. ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಡಾ. ಜಗದೀಶ್ ಎಂ ವಿ**
ಗ್ರಂಥಪಾಲಕರು, ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಕರ್ನಾಟಕ, ಭಾರತ

# ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಯಲ್ಲಿ ಗ್ರಂಥಾಲಯದ ಮಹತ್ವ

**ಡಾ. ಜಗದೀಶ್ ಎಂ ವಿ, ಡಾ. ಜಯಕುಮಾರ**

**DOI:** https://doi.org/10.22271/24545813.2024.v10.i1a.931

**ಪೀಠಿಕೆ**

ಜಗತ್ತನ್ನು ಬೆಳಗಿಸಲು ಸೂರ್ಯನ ಅವಶ್ಯಕತೆಯಿರುವಂತೆ ಬದುಕನ್ನು ಬೆಳಗಿಸಲು ಗ್ರಂಥಗಳ ಅವಶ್ಯಕತೆಯು ಅಪಾರವಾಗಿದೆ ಎಂಬುದು ಸಾರ್ವಕಾಲಿಕ ಸತ್ಯ. "ಗ್ರಂಥಾಲಯ" ಎಂಬ ಹೆಸರೇ ಸೂಚಿಸುವಂತೆ "ಇದು ಗ್ರಂಥಗಳ ಆಲಯ". ಇದರ ಪದಶಃ ಅರ್ಥ "ಗ್ರಂಥಗಳನ್ನು ಸಂಗ್ರಹಿಸಿಟ್ಟಿರುವ ಮನೆ". ಅಲ್ಲದೆ ಗ್ರಂಥಭಂಡಾರ, ಪುಸ್ತಕಭಂಡಾರ ಎಂದೂ ಕರೆಯುವುದುಂಟು. ಆದರೆ ಈಗಿನ ಗ್ರಂಥಾಲಯಗಳು ಕೇವಲ ಗ್ರಂಥ ಸಂಗ್ರಹಾಲಯಗಳಾಗಿರದೆ, ಜ್ಞಾನಪ್ರಸಾರದ ಎಲ್ಲಾ ಮಾಧ್ಯಮಗಳ ಅಂದರೆ-ರೇಡಿಯೋ, ಟಿವಿ,ದೃಶ್ಯ- ಶ್ರವಣ ಮುಂತಾದವುಗಳ ಕೇಂದ್ರಗಳಾಗಿವೆ .ಈ ದಿಸೆಯಲ್ಲಿ ಮಕ್ಕಳು, ವಿದ್ಯಾರ್ಥಿಗಳು ವಯಸ್ಕರು, ಮಧ್ಯವಯಸ್ಕರು ಹಾಗೂ ವೃದ್ಧರು, ವಿಜ್ಞಾನಿಗಳು, ಸಾಹಿತಿಗಳು ಇನ್ನಿತರರು ತಮಗೆ ಬೇಕಾದ ಗ್ರಂಥಗಳ ಉಪಯೋಗದಿಂದ ತಮ್ಮ ಜ್ಞಾನದಾಹವನ್ನು ಹಿಂಗಿಸಿಕೊಳ್ಳಬಹುದಾದ ಅವಕಾಶವನ್ನು ಇಂದಿನ ಗ್ರಂಥಾಲಯಗಳು ಒದಗಿಸಿಕೊಡುತ್ತವೆ.

ಗ್ರಂಥಾಲಯವು ಮಾಡುವ ಅತ್ಯಂತ ಪ್ರಮುಖ ಕಾರ್ಯವೆಂದರೆ ದೇಶದ ಭವಿಷ್ಯವನ್ನು ರೂಪಿಸುವುದು. ಇದು ಯುವ ಮನಸ್ಸಿನಲ್ಲಿ ಓದುವ ಮತ್ತು ಹೊಸ ವಿಷಯಗಳನ್ನು ಸಂಶೋಧಿಸುವ ಅಭ್ಯಾಸವನ್ನು ಹುಟ್ಟು ಹಾಕುತ್ತದೆ. ಗ್ರಂಥಾಲಯವು ಕೇವಲ ಪುಸ್ತಕಗಳಿರುವ ಕೊಠಡಿಯಲ್ಲ, ಇದು ಮಾಹಿತಿ ಮತ್ತು ಸಮುದಾಯ ಸೇವೆಗೆ ಪ್ರವೇಶವನ್ನು ಒದಗಿಸುವ ಸ್ಥಳವಾಗಿದೆ. ಗ್ರಂಥಾಲಯಗಳಲ್ಲಿ ಗ್ರಂಥಗಳನ್ನ ಓದುವುದೆಂದರೆ ಆನಂದದಾಯಕವಾದುದು. ಇದು ಶಕ್ತಿಸಾಮರ್ಥ್ಯ ಸಂಚಲನಕಾರಿಯಾದುದು. ಹಾಗೂ ಏಕಾಂತತೆಯ ನೀಗಿಸಿ ಹೊಸ ದೃಷ್ಟಿಕೋನವನ್ನು ಸೃಷ್ಟಿಸಬಲ್ಲದು, ಆ ಸಾಮರ್ಥ್ಯದ ದೃಷ್ಟಿಯಿಂದ ಕೆಲಸಕಾರ್ಯಗಳಲ್ಲಿ ನಾವು ತೋರಿಸುವ ವಿವೇಚನೆ ಮತ್ತು ವ್ಯವಸ್ಥೆಗಳಲ್ಲೂ ಅದರ ಪ್ರಧಾನ ಉಪಯೋಗ ಕಂಡುಬರುತ್ತದೆ.

## ಶೈಕ್ಷಣಿಕ ಗ್ರಂಥಾಲಯದ ಮಹತ್ವ

ಗ್ರಂಥಾಲಯವು ಪೀಳಿಗೆಯಿಂದ ಪೀಳಿಗೆಗೆ ಜ್ಞಾನವನ್ನು ಪಸರಿಸುವ ಮತ್ತು ದಿನದಿಂದ ದಿನಕ್ಕೆ ಬದಲಾವಣೆಯನ್ನ ನಿರ್ವಹಿಸುವ ಕಾರ್ಯವನ್ನು ಮಾಡುತ್ತಿದೆ. ಮುಂದುವರಿದ ಮಾಹಿತಿ ಮತ್ತು ತಂತ್ರಜ್ಞಾನದ ಸಂಪರ್ಕದಲ್ಲಿ ಸಾಮಾನ್ಯವಾಗಿ ಆಗುವಂತಹ ಬದಲಾವಣೆಗಳ ವಿಷಯವನ್ನು

ಈಗಿನ ಗ್ರಂಥಾಲಯವು ಒದಗಿಸುವಲ್ಲಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಇದು ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನಾಭಿವೃದ್ಧಿಗೆ ಮತ್ತು ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಹಾಗೂ ಅಮೂಲ್ಯವಾದ ಸಮಯವನ್ನು ಉಪಯೋಗಿಸಲು ಗ್ರಂಥಾಲಯಗಳು ಬಹಳ ಮುಖ್ಯ. ಹಾಗೂ ದೇಶದ ವಿವಿಧ ಇಲಾಖೆಗಳ ವಿಷಯಗಳಿಗೆ ಸಂಬಂದಿಸಿದಂತೆ ದತ್ತಾಂಶದ ಮಾಹಿತಿಯನ್ನು ಕಲೆಹಾಕಿ ಓದುಗರಿಗೆ ರವಾನಿಸುವ ಕೆಲಸವನ್ನು ಮಾಡುತ್ತದೆ. ಅಲ್ಲದೆ ಸಾಂಸ್ಕೃತಿಕ ವಿದ್ಯಮಾನಗಳ ಬೆಳವಣಿಗೆಗಳ ಬಗ್ಗೆ ಹಾಗೂ ಭೌಗೋಳಿಕ ವಿದ್ಯಮಾನಗಳ ಸಮೀಕ್ಷೆಯ ವಿಷಯಕ್ಕೆ ಸಂಭಂದಿಸಿದಂತೆ ಮಾಹಿತಿಯನ್ನು ಒದಗಿಸುತ್ತದೆ. ಮಾದ್ಯಮದಲ್ಲಿ ಆಗುತ್ತಿರುವಂತಹ ತ್ವರಿತ ಬದಲಾವಣೆಯನ್ನು ಕುರಿತ ತತ್ಕಾಲದಲ್ಲಿ ನವೀಕರಿಸಿದ ಮಾಹಿತಿಯನ್ನು ಸಂಪನ್ಮೂಲದ ಮೂಖಾಂತರ ತನ್ನ ಸೇವೆಯನ್ನು ನೀಡುತ್ತದೆ. ಹೀಗೆ ಹಲವಾರು ಮಾಹಿತಿಗಳನ್ನು ಪುಸ್ತಕದ ರೀತಿಯಲ್ಲಿ ಮತ್ತು ಡಿಜಿಟಲ್ ರೂಪದಲ್ಲಿ ಸಂಪನ್ಮೂಲವನ್ನು ಗ್ರಂಥಾಲಯವು ಒದಗಿಸುತ್ತದೆ.

ಪುಸ್ತಕಗಳು ಒಳ್ಳೆಯ ಗೆಳೆಯರಿದ್ದಂತೆ ಇದು ಮನಸ್ಸಿನ ಸಂವೇದನೆಯನ್ನು ಪರಿಪೂರ್ಣವಾಗಿ ಪಕ್ವಗೊಳಿಸಲು ಗುರುವಿನಂತೆ ಮಾರ್ಗದರ್ಶನವನ್ನು ಓದುವ ಮೂಲಕ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ವಿದ್ಯಾರ್ಥಿ ತನ್ನ ಶೈಕ್ಷಣಿಕ ಬದ್ದತೆಯನ್ನು ಕಲಿಯಲು ಮತ್ತು ನಿರ್ವಹಿಸಲು ಹಾಗೂ ವಿದ್ಯಾರ್ಥಿ ಜೀವನದಲ್ಲಿ ಮನಸ್ಸಿನ ಒತ್ತಡವನ್ನು ಸಮಾನವಾಗಿ ಕಾಪಾಡಲು ಮತ್ತು ಅವರ ವಿಕಾಸಕ್ಕೆ ಪುಸ್ತಕಗಳು ಅತ್ಯಮೂಲ್ಯವಾದ ವಸ್ತುವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಗ್ರಂಥಾಲಯದಲ್ಲಿ‘ ಅ’ ಅಕ್ಷರದಿಂದ ‘ಳ’ ವರೆಗಿನ ಪ್ರತಿಯೊಂದು ವಿಷಯಗಳಿಗೆ ಸಂಬಂಧಪಟ್ಟಂತಹ ಗ್ರಂಥಗಳು ದೊರೆಯುವುದರಿಂದ ಓದುಗರಿಗೆ ತಮಗೆ ಇಷ್ಟವಾದ ಗ್ರಂಥವನ್ನು ಓದಲು ಅನುಕೂಲಕರವಾಗಿರುತ್ತದೆ. ಅಲ್ಲದೆ ಮಾಸಪತ್ರಿಕೆಗಳು, ವಾರಪತ್ರಿಕೆಗಳು, ದಿನಪತ್ರಿಕೆಗಳು ಕೂಡ ಸಿಗುತ್ತವೆ. ಪುಸ್ತಕ ವಿದ್ಯಾರ್ಥಿ ಮಿತ್ರ, ಇದು ಜ್ಞಾನವನ್ನು ನೀಡುವ ಕಾಮಧೇನು, ಮಾರ್ಗದರ್ಶಕ ಮಾಹಿತಿ ಪಡೆಯಲು ಶೈಕ್ಷಣಿಕ ಗ್ರಂಥಾಲಯಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಶೈಕ್ಷಣಿಕ ಗ್ರಂಥಾಲಯದಲ್ಲಿ ವಿವಿಧ ರೀತಿಯ ಬೇರೆ ಬೇರೆ ಭಾಷೆಯ ಪುಸ್ತಕಗಳು ಕೂಡ ದೊರೆಯುತ್ತವೆ. ಇದರಿಂದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಲೇಖಕರಿಗೆ, ಶಿಕ್ಷಕರಿಗೆ ಹೀಗೆ ಎಲ್ಲಾ ವರ್ಗದ ಜನರಿಗೂ ಗ್ರಂಥಾಲಯಗಳು ಸಹಾಯಕವಾಗಿದೆ. ಶೈಕ್ಷಣಿಕ ಗ್ರಂಥಾಲಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಒಂದೆ ಎಂಬ ಭಾವನೆಯನ್ನು ಮೂಡಿಸುತ್ತದೆ, ಇಲ್ಲಿ ಯಾವುದೇ ಭೇದ ಭಾವ ಇರುವುದಿಲ್ಲ. ಇಲ್ಲಿ ಎಲ್ಲಾ ರೂಸಮಾನರು ಎಂಬ ವಾತಾವರಣವನ್ನು ಸೃಷ್ಠಿಸುವ ಒಂದು ದೇವಸ್ಥಾನವಾಗಿದೆ. ಹಾಗೂ ಇಲ್ಲಿ ಓದುವುದರಿಂದ ನಮ್ಮ ವ್ಯಕ್ತಿತ್ವ ವಿಕಸನವನ್ನು ಹಾಗೂ ಶೈಕ್ಷಣಿಕ ವೃತ್ತಿಜೀವನವನ್ನು ರೂಪಿಸಕೊಳ್ಳಲು ಗ್ರಂಥಾಲಯವು ಸಹಕಾರಿಯಾಗಿದೆ.

**ಶೈಕ್ಷಣಿಕ ಕ್ಷೇತ್ರಕ್ಕೆ ಗ್ರಂಥಾಲಯದಿಂದ ಆಗುವ ಉಪಯೋಗಗಳು**

ಶೈಕ್ಷಣಿಕ ಗ್ರಂಥಾಲಯವು ವರ್ತಮಾನಕ್ಕೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಅಗತ್ಯವಾಗಿ ಬೇಕಾಗಿರುವ ಸ್ಥಳವಾಗಿದೆ ಎಂದು ಪರಿಗಣಿಸಬೇಕು. ಪುಸ್ತಕಗಳು ಇಲ್ಲದೆ ಜ್ಞಾನ ಸಂಪಾದನೆ ಶೂನ್ಯ. ಹಾಗೆ ರಾಷ್ಟದ ಪ್ರಗತಿ ಸಾಧಿಸಲು ಸಾದ್ಯವಾಗುವುದಿಲ್ಲ .ಇಂದಿನ ವಿದ್ಯಾರ್ಥಿಗಳೆ ಮುಂದಿನ ಪ್ರಜೆಗಳು ಎಂಬ ಅರ್ಥದಲ್ಲಿ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯವನ್ನು ವೃದ್ಧಿಸಿಕೊಳ್ಳಲು ಗ್ರಂಥಾಲಯಗಳಿಗೆ ಹೋಗುವ ಅಭ್ಯಾಸ ಬೆಳೆಸಿಕೊಳ್ಳುವುದು ಮುಖ್ಯವಾಗಿದೆ.

ಈ 21ನೇ ಶತಮಾನದಲ್ಲಿ ಡಿಜಿಟಲ್ ಯುಗದಲ್ಲಿನ ಬದಲಾವಣೆಯು ಗ್ರಂಥಾಲಯದ ಸತ್ವವನ್ನು ಮರೆಯಲಾರಂಭಿಸಿದೆ. ಅದರೆ ಗ್ರಂಥಾಲಯವು ಅದಕ್ಕೆ ಪೂರಕವಾಗಿ ಡಿಜಿಟಲೀಕರಣ ಹೊಂದಿ ತನ್ನ ಸೇವೆಯನ್ನು ಶೈಕ್ಷಣಿಕ ಮಟ್ಟದಲ್ಲಿ ಉನ್ನತವಾದ ರೀತಿಯಲ್ಲಿ ನಿರ್ವಹಿಸಲು ಕಾರ್ಯೋನ್ಮುಖವಾಗಿದೆ. ಇದರಿಂದ ಹಲವಾರು ಓದುಗರು ತಮಗೆ ಬೇಕಾದ ಉಪಯುಕ್ತ ಮಾಹಿತಿಯನ್ನು ಪಡೆಯಲು ಗ್ರಂಥಾಲಯವು ಸಹಕಾರಿಯಾಗಿದೆ.

ಇಂಟರ್ನೆಟ್ ಕೆಲವೊಮ್ಮೆ ಅರಿತುಕೊಳ್ಳಲು ಸಾಧ್ಯವಾಗದ ಅನೇಕ ತಪ್ಪುಗಳನ್ನು ಹೊಂದಿರಬಹುದು. ಇಂಟರ್ನೆಟ್ ಗ್ರಂಥಾಲಯಗಳನ್ನು ಅನುಸರಿಸುತ್ತದೆ. ಆದರೆ ಅದನ್ನು ಬದಲಿಸಲು ವಿಫಲವಾಗಿದೆ. ಇಂತಹ ಸಂದರ್ಭದಲ್ಲಿ ಗ್ರಂಥಾಲಯವು ಸರಿಯಾದ ಸಮಯಕ್ಕೆ ಸರಿಯಾದ ಮಾಹಿತಿಯನ್ನು ತಿಳಿಸುವ ಕೇಂದ್ರವಾಗಿದೆ.

ಆಧುನಿಕ ಶೈಕ್ಷಣಿಕ ಗ್ರಂಥಾಲಯಗಳು ತಮ್ಮ ವಿದ್ಯಾರ್ಥಿಗಳಿಗೆ ಇ–ಸಂಪನ್ಮೂಲಗಳು ಒದಗಿಸುವ ಮೂಲಕ ಕಲ್ಪನೆಗಿಂತ ಹೆಚ್ಚಿನ ಸೇವೆಯನ್ನು ನೀಡುತ್ತದೆ. ಇದರಿಂದ ವಿದ್ಯಾರ್ಥಿಗಳು ಗ್ರಂಥಾಲಯದ ವ್ಯಾಮೋಹ ಹೆಚ್ಚಿಸಲು ಮತ್ತು ಬಳಸಿಕೊಳ್ಳಲು ಉಪಯೋಗವಾಗಿದೆ.

ಶೈಕ್ಷಣಿಕ ಗ್ರಂಥಾಲಯದಲ್ಲಿ ಉಚಿತ ಇಂಟರ್ನೆಟ್ ಸರ್ಫಿಂಗ್ ಮಾಡಲು ಮತ್ತು ಹೆಚ್ಚಿನ ಮಾಹಿತಿಯನ್ನು ಪಡೆಯಲು ವಿವಿಧ ರೀತಿಯ ಆನ್ಲೈನ್ ಸೇವೆಯನ್ನು ಒದಗಿಸುತ್ತದೆ. ಇದರಿಂದ ಓದುಗರಿಗೆ ತಮಗೆ ಬೇಕಾದ ಮಾಹಿತಿಯನ್ನು ಪಡೆಯಲು ಮತ್ತು ಜ್ಞಾನವನ್ನು ವೃದ್ಧಿಸಲು ತಕ್ಷಣದಲ್ಲಿ ಉಪಯುಕ್ತವಾಗಿದೆ.

ಅನೇಕ ಆಧುನಿಕ ಶೈಕ್ಷಣಿಕ ಗ್ರಂಥಾಲಯಗಳು ಈಗ ಆನ್ಲೈನ್ ಅತಿಥಿ ಉಪನ್ಯಾಸಗಳನ್ನು ಮತ್ತು ಮಹಾನ್ ತತ್ವಜ್ಞಾನಿಗಳಿಂದ ಆಸಕ್ತಿದಾಯಕ ವಿಷಯಗಳ ಕುರಿತು ಸೆಮಿನಾರ್, ಸಮ್ಮೇಳನಗಳು, ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ನೀಡುತ್ತಿವೆ. ಇದರಿಂದ ನೇರವಾಗಿ ಅ ಸ್ಥಳಕ್ಕೆ ಹೋಗಬೇಕಾದ ಪ್ರಮೇಯವಿರುವುದಿಲ್ಲ ಹಾಗೂ ಇದರಿಂದ ಎಷ್ಟೋ ಅರ್ಥಿಕವಾಗಿ ಹಣಕಾಸಿನ ತೊಂದರೆ ಇರುವಂತಹ ಹಿಂದುಳಿದಂತಹ ವಿದ್ಯಾರ್ಥಿಗಳಿಗೆ ಹಾಗೂ ಓದುಗರಿಗೆ ಸಹಾಯಕವಾಗಿದೆ.

ಕಲಿಯುವ ಉತ್ಸಾಹವಿರುವ ವಿದ್ಯಾರ್ಥಿಗಳು ಶೈಕ್ಷಣಿಕ ಗ್ರಂಥಾಲಯದ ಪ್ರಾಮುಖ್ಯತೆಯನ್ನು ಬಳಸಿಕೊಳ್ಳುವ ಪ್ರಮೇಯ ಹಾಗೂ ತಿಳುವಳಿಕೆ ಕಡಿಮೆ ಇದ್ದರೆ ಪ್ರತಿದಿನ ಗ್ರಂಥಾಲಯಕ್ಕೆ ಭೇಟಿ ನೀಡುತ್ತಾರೆ. ಅದರೆ ಕೆಲವು ವಿದ್ಯಾರ್ಥಿಗಳಿಗೆ ಅದರ ಅರಿವು ಇಲ್ಲದೆ ಇರುವುದರಿಂದ ಗ್ರಂಥಾಲಯದ ಬಳಕೆ ಹಾಗಾಗ ಮಾತ್ರ ಉಪಯೋಗಿಸುತ್ತಾರೆ. ಅದ್ದರಿಂದ ಗ್ರಂಥಾಲಯದ ಗ್ರಂಥಪಾಲಕರು ಅದರ ಪ್ರಯೋಜನ ಮತ್ತು ಉಪಯೋಗಗಳ ಬಗ್ಗೆ ವಿಷೇಶ ಕಾರ್ಯಕ್ರಮಗಳನ್ನು ನೆಡೆಸುವುದು ವಿದ್ಯಾರ್ಥಿಗಳಿಗೆ ಸಹಾಯಕವಾಗಿರುತ್ತದೆ. ಇದರಿಂದ ಅವರಲ್ಲಿ ಗ್ರಂಥಾಲಯದ ಬಗ್ಗೆ ಅಸಕ್ತಿ ಮೂಡಲು ಅನುಕೂಲವಾಗುತ್ತದೆ. ಗ್ರಂಥಗಳನ್ನು ಪ್ರೀತಿಸುವ ಮತ್ತು ಗ್ರಂಥಾಲಯಕ್ಕೆ ಪ್ರತಿದಿವಸ ಭೇಟಿ ನೀಡುವ ಆಸಕ್ತಿ ಹೊಂದಲು ಸಹಾಯವಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಕ್ರಿಯಾತ್ಮಕವಾದ ಅಲೋಚನೆ ಮತ್ತು ಮಾನಸಿಕ ಸಾಮಾರ್ಥ್ಯವನ್ನು ಹೆಚ್ಚಿಸುವಂತ ರೀತಿಯಲ್ಲಿ ಹಾಗೂ ಸ್ಪರ್ದಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲು ಶೈಕ್ಷಣಿಕ ಗ್ರಂಥಾಲಯವು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಅದ್ದರಿಂದ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಭೇಟಿನೀಡುವುದು ಮತ್ತು ಜ್ಞಾನದಾಹದ ತಳಹದಿಯನ್ನು ಮುಟ್ಟುವುದು ಸುಲಭವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಮಾಹಿತಿಯನ್ನು ಹುಡುಕಲು ಮತ್ತು ತೆಗೆಯಲು ಗ್ರಂಥಾಲಯದ ಗ್ರಂಥಪಾಲಕರು ಸಹಕಾರಿಯಾದ ಸೇವೆಯನ್ನು ನೀಡುತ್ತಾರೆ.

ಗ್ರಂಥಾಲಯವು ಪ್ರೋತ್ಸಾಹ, ಕುತೂಹಲ, ಸಮಸ್ಯೆ ಪರಿಹರಿಸುವುದು ಮತ್ತು ವಿಜ್ಞಾನ ತಂತ್ರಜ್ಞಾನದ ಹೊಸ ಅವಿಸ್ಕಾರವನ್ನು ಪರಾಮರ್ಶಿಸಿ ರೂಪಿಸಲು ಸಹಾಯಕವಾಗಿದೆ. ದೇಶದ ಸಾಕ್ಷಾರತೆಯನ್ನು ಹೆಚ್ಚಿಸಲು ಗ್ರಂಥಾಲಯವು ವಿವಿಧ ಕಾರ್ಯಕ್ರಮಗಳ ಮೂಲಕ ಯೋಜನೆಗಳನ್ನು ನಿರೂಪಿಸಿ ಸಹಕರಿಸುತ್ತದೆ.

ವಿದ್ಯಾರ್ಥಿಗಳಲ್ಲಿ ಉದ್ಯಮದ ಮಾಹಿತಿ, ವ್ಯವಹಾರ ವ್ಯಾಪಾರ ವಹಿವಾಟಿನ ವೃತ್ತಿಮಾರ್ಗದರ್ಶನ, ಆಡಳಿತ ನಿರ್ವಹಣೆ, ವೈಜ್ಞಾನಿಕ ಮಾಹಿತಿ, ಸಾಹಿತ್ಯ ಶೋಧನೆ, ಭಾಷಾಂತರ ಸೇವೆ, ಪ್ರಚಲಿತ ಮಾಹಿತಿ, ತಾಂತ್ರಿಕ ನಿರ್ವಹಣೆ, ಸಂಶೋಧನೆಗಳು ಹೀಗೆ ಹಲವಾರು ಮಾರ್ಗದರ್ಶನವನ್ನು ಶೈಕ್ಷಣಿಕ ಗ್ರಂಥಾಲಯವು ಸೂಚಿಸುವಲ್ಲಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಹೀಗೆ ಗ್ರಂಥಾಲಯವು ಓದುಗರ ಮತ್ತು ಕಲಿಯುವವರ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಿದ್ಯಾರ್ಥಿಗಳಿಗೆ ಇದು ಅತ್ಯಂತ ನೆಚ್ಚಿನ ಸ್ಥಳವಾಗಿದೆ. ಹಾಗೂ ಜೀವನವನ್ನು ನಿರೂಪಿಸಿಕೊಳ್ಳಲು ಸಹಕಾರಿಯಾಗಿದೆ.

## ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಗ್ರಂಥಾಲಯದಿಂದ ದೊರೆಯುವ ಅನುಕೂಲಗಳು

ಹೇರಳವಾಗಿ ದೊರೆಯುವಂತ ಸಂಪನ್ಮೂಲ ಗ್ರಂಥಾಲಯವು ಒಂದು ಸಂಪನ್ಮೂಲ ಕೇಂದ್ರವಾದದು ಇಲ್ಲಿ ಎಲ್ಲಾ ರೀತಿಯ ಮಾಹಿತಿ ಕಣಜವನ್ನು ಅವರಿಸಿಕೊಂಡಿದೆ. ಈ ಗ್ರಂಥಾಲಯದಿಂದ ಪುಸ್ತಕವನ್ನು ಶೇಖರಣೆ ಮಾಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಹೇರಳವಾಗಿ ದೊರೆಯುವಂತಹ ಸಂಪನ್ಮೂಲವನ್ನು ಹೆಚ್ಚಿನ ರೀತಿಯಲ್ಲಿ ತಕ್ಷಣದಲ್ಲಿ ಮಾಹಿತಿ ದೊರೆಯಲು ಇಂಟರ್ನೆಟ್ ಸೌಲಭ್ಯವು ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ. ಇದರಿಂದ ವಿದ್ಯಾರ್ಥಿಗಳು ತಮ್ಮ

ಜ್ಞಾನರ್ಜನೆಯನ್ನು ಹೇರಳವಾಗಿ ಪಡೆಯಲು ಈ ಗ್ರಂಥಾಲಯವು ಸಹಾಯಕವಾಗಿದೆ. ಗ್ರಂಥಾಲಯಗಳು ಕಾಮಧೇನುವೆ" ಸರಿ" ಏಕೆಂದರೆ ಇಚ್ಛೆಸಿದ ಜನಗಳಿಗೆ ಅವರ ಭಾವನೆಗಳಿಗೆ ತಕ್ಕಂತೆ ಎಲ್ಲಾ ರೀತಿಯ ಓದುವ ಸಂಪನ್ಮೂಲಗಳನ್ನು ಒದಗಿಸುವ ಏಕೈಕ ಕ್ಷೇತ್ರವಾಗಿರುವುದು ಈ ಗ್ರಂಥಾಲಯ.

### ಏಕಾಗ್ರತೆ ಸುಧಾರಿಸುವಿಕೆ

ಗ್ರಂಥಾಲಯವು ವಿದ್ಯಾರ್ಥಿಗಳಿಗೆ ಹಾಗೂ ಇತರ ಓದುಗರಲ್ಲಿ ಏಕಾಗ್ರತೆಯನ್ನು ಮೂಡಿಸುವ ಕೇಂದ್ರವಾಗಿದೆ. ಇಲ್ಲಿ ಮಾನಸಿಕ ಸ್ಥಿರತೆಯ ಹಿಡಿತವನ್ನು ಹಾಗೂ ಒತ್ತಡವನ್ನು ಸುದಾರಿಸಲು ನಿಶಬ್ಧ ವಲಯ ಸಹಾಯಕವಾಗಿದೆ. ಅಲ್ಲದೆ ಗ್ರಂಥಾಲಯದಲ್ಲಿ ಸಿಗುವಂತಹ ಎಲೆಕ್ಟ್ರಾನಿಕ್ಸ್ ಮಾಧ್ಯಮ ಸಂಪನ್ಮೂಲಗಳ ಹಾಗೂ ಗ್ರಂಥಸಂಪನ್ಮೂಲವು ಅವರವರ ಸ್ವಇಚ್ಚೆಗೆ ಅನುಗುಣವಾಗಿ ಸಿಗುವುದರಿಂದ ಅವುಗಳ ಓದಿನ ಮೂಲಕ ಮಾನಸಿಕ ಹಾಗೂ ದೈಹಿಕ ಒತ್ತಡವನ್ನು ನಿಯಂತ್ರಿಸಬಹುದಾಗಿದೆ. ಇದರಿಂದ ಓದುಗರಲ್ಲಿ ಏಕಾಗ್ರತೆಯನ್ನು ರೂಢಿಸಿಕೊಳ್ಳುವಲ್ಲಿ ಗ್ರಂಥಾಲಯವು ಪ್ರಮುಖ ಪಾತ್ರವಹಿಸುತ್ತದೆ.

### ವ್ಯಕ್ತತ್ವವಿಕಾಸನ

ಗ್ರಂಥಾಲಯದಲ್ಲಿರುವಂತಹ ಸೌಲಭ್ಯಗಳು ಜೀವನ ಕೌಶಲ್ಯವನ್ನು ರೂಢಿಸಿಕೊಳ್ಳಲು ನಾವೀನ್ಯತೆಯನ್ನು ಬೆಳೆಸಿಕೊಳ್ಳಲು, ವಿಮರ್ಶಾತ್ಮಕವಾದ ಚಿಂತನೆಯನ್ನು ಮಾಡಲು ಹಾಗೂ ಸಂಶೋಧನಾತ್ಮಕ ಬರಹವನ್ನು ಸುಧಾರಿಸಲು ಎಲ್ಲಾ ವರ್ಗದ ಓದುಗರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧಕರುಗಳಿಗೆ ತಮ್ಮ ವ್ಯಕ್ತಿತ್ವ ವಿಕಸನವನ್ನು ರೂಪಿಸವ ಕಾರ್ಯವನ್ನು ಮಾಡುತ್ತದೆ.

### ಹೆಚ್ಚುವರಿ ಮಾರ್ಗದರ್ಶನ

ಗ್ರಂಥಾಲಯದಲ್ಲಿ ಸಿಗುವಂತಹ ಸಂಪನ್ಮೂಲಗಳ ಸ್ಪರ್ಶದಿಂದ ಗ್ರಂಥಾಲಯದ ಬಳಕೆದಾರರಿಗೆ ಓದುವ ಅಭ್ಯಾಸದಿಂದ ಇತರರಿಗೆ ಮಾರ್ಗದರ್ಶಕವಾಗಿ ರೂಪುಗೊಳ್ಳುವಂತಹ ಅರಿವಿನ ಸಾಮರ್ಥ್ಯವನ್ನು ತನ್ನ ಸುತ್ತಮುತ್ತಲಿನ ಸಾಮಾಜಿಕ ಸ್ಥರದಲ್ಲಿರುವಂತಹ ಜನರಿಗೆ ಸಮಾಜದಲ್ಲಿ ಬುದ್ಧಿಮತ್ತೆ ತಿಳಿಸಲು ಮತ್ತು ಅವುಗಳ ಬಗ್ಗೆ ಚರ್ಚಿಸಲು ಈ ಗ್ರಂಥಾಲಯವು ಮಾರ್ಗದರ್ಶನದ ಸ್ವರೂಪವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಅಲ್ಲದೆ ಗ್ರಂಥಪಾಲಕರ ಆಪ್ತಸಮಾಲೋಚನೆಯಿಂದ ಸಿಗುವಂತಹ ಹೆಚ್ಚುವರಿ ಮಾರ್ಗಧರ್ಶನವು ಸುಲಭವಾಗಿ ತಿಳಿಯಲು ಮತ್ತು ಅರ್ಥೈಸಿಕೊಳ್ಳಲು ಸಹಾಯಕವಾಗಿದೆ.

### ಉದ್ಯೋಗ ಮಾರ್ಗದರ್ಶನ

ಗ್ರಂಥಾಲಯದಲ್ಲಿ ಉದ್ಯೋಗ ಮಾರ್ಗದರ್ಶನದ ಪ್ರತ್ಯೇಕ ವಿಭಾಗವನ್ನು ತೆರೆದು ವಿದ್ಯಾರ್ಥಿಗಳಿಗೆ ಭಾವೀ ಭವಿಷ್ಯದ ನಿರ್ಮಾಣಕ್ಕೆ ಅನುಕೂಲಕರವಾದ ಮಾಹಿತಿಯನ್ನು ಒದಗಿಸುವುದು ಹಾಗೂ ದಿನಪತ್ರಿಕೆ, ಮಾಧ್ಯಮದಲ್ಲಿನ ಜಾಹೀರಾತು ಹಾಗೂ ಮೌಖಿಕವಾಗಿ ದೊರೆಯುವಂತಹ ಅಧಿಕೃತ ಮಾಹಿತಿಯನ್ನು ಒದಗಿಸುವುದು ಹಾಗೂ ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನವನ್ನು ಎದುರಿಸಲು ತಯಾರಾಗಲು ಬೇಕಾದಂತಹ ಸಂಪನ್ಮೂಲವನ್ನು ಒದಗಿಸುವುದು ಹಾಗೂ ಅವರಿಗೆ ಮಾನಸಿಕವಾಗಿ ಸದೃಢರಾಗಿಸಲು ಸಹಾಯ ಮಾಡುವುದು ಗ್ರಂಥಪಾಲಕರ ಧ್ಯೇಯವಾಗಿರುತ್ತದೆ.

### ಗುಂಪು ಅಧ್ಯಯನ

ಗ್ರಂಥಾಲಯದಲ್ಲಿ ಸಿಗುವಂತಹ ಹಲವಾರು ಮಾಹಿತಿ ಸಂಪನ್ಮೂಲಗಳ ಸಂಗ್ರಹದಿಂದ ವಿದ್ಯಾರ್ಥಿಗಳು ತನ್ನ ಸಹಪಾಠಿಗಳ ಜೊತೆ ಸೇರಿ ಗುಂಪು ಅಧ್ಯಯನ ಮಾಡಲು ಸಹಕಾರಿಯಾಗಿದೆ. ಇದರಿಂದ ಸಮಾಜದಲ್ಲಿ ಹಲವಾರು ವಿಷಯಗಳ ಚರ್ಚೆ ಮುನ್ನೆಲೆಗೆ ಬಂದು ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಗ್ರಂಥಾಲಯವು ತನ್ನ ಕಾರ್ಯವನ್ನು ನಿರ್ವಹಿಸುತ್ತದೆ.

### ಸಮಾಜ ಮುಖಿಯಾಗಲು ಅವಕಾಶ

ಗ್ರಂಥಾಲಯದಲ್ಲಿ ಸಿಗುವಂತಹ ಮಾಹಿತಿ ಸಂಪನ್ಮೂಲಗಳೊಂದಿಗೆ ಗ್ರಂಥಾಲಯದಲ್ಲಿ ಹಮ್ಮಿಕೊಳ್ಳುವ ಅರಿವು ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ಮಾನವೀಯತೆ ಗುಣಲಕ್ಷಣಗಳನ್ನು ಬೆಳಸಿಕೊಳ್ಳಲು ಸಮಾಜದೊಂದಿಗೆ ತಮ್ಮ ಒಡನಾಟ ಬೆಳಸಿಕೊಳ್ಳಲು ಮತ್ತು ಗೆಳತನವನ್ನು ಸಮಾಜದೊಂದಿಗೆ ನಿರ್ವಹಿಸಲು ವೃತ್ತಾಕಾರದ ಗುಣಲಕ್ಷಣಗಳನ್ನು ನಮ್ಮ ಸುತ್ತಲಿರುವ ಸಮಾಜದೊಂದಿಗೆ

ಬೆರೆಯಲು ಹಾಗೂ ಸಮಾಜ ಸೇವೆಯಲ್ಲಿ ಕೈಗೊಳ್ಳಲು ಗ್ರಂಥಾಲಯವು ಶ್ರಮಿಸುತ್ತದೆ.

**ಓದಲು ಉತ್ತೇಜನ**

ತಂತ್ರಜ್ಞಾನವು ಈಗಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸಿದೆ. ಆದರೆ ಅದರಲ್ಲೂ ಹಲವು ರೀತಿಯ ನ್ಯೂನತೆಗಳನ್ನು ಒಳಗೊಂಡಿರುವುದರಿಂದ ಅಂತಹ ಸಮಸ್ಯೆಗಳಿಗೆ ಗ್ರಂಥಾಲಯದಲ್ಲಿರುವಂತಹ ಗ್ರಂಥಪಾಲಕರು ನೀಡುವ ಮಾರ್ಗದರ್ಶನದ ಉತ್ತೇಜನದಿಂದ ಓದುಗರು ತಮ್ಮ ಜ್ಞಾನರ್ಜನೆಯನ್ನು ಬೆಳಸಿಕೊಳ್ಳಬಹುದು. ಹಾಗೆಯೇ ಈ ಓದುವ ಅಭ್ಯಾಸವು ಕಲಿಕೆಯ ಒಂದು ವಿಮರ್ಶೆಯನ್ನು ಸೆಳೆಯಲು ಗ್ರಂಥಾಲಯವು ಗ್ರಂಥಪಾಲಕನ ನೆರವಿನೊಂದಿಗೆ ಯಶಸ್ವಿ ಕಾರ್ಯಚರಣೆಯನ್ನು ನಿರ್ವಹಿಸುತ್ತದೆ.

**ಬುದ್ಧಿಶಕ್ತಿಯ ಕೊಡುಗೆ ನೀಡುವುದು**

ಇತ್ತೀಚಿನ ಸಂಶೋಧನೆಯ ಪ್ರಕಾರ ಗ್ರಂಥಾಲಯವು ಕಿರುಪ್ರಸರಣ ಸೇವೆ, ದೀರ್ಘಪ್ರಸರಣ ಸೇವೆಯು ವಿದ್ಯಾರ್ಥಿಗಳಿಗೆ ಬೌದ್ಧಿಕ ಜೀವನ, ಮಾನಸಿಕ ಸಾಮರ್ಥ್ಯತೆ ಹಾಗೂ ಪ್ರಶ್ನೋತ್ತರ ಮಾಲಿಕೆಗಳು ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ಬೇಕಾದಂತಹ ಒಂದು ಜ್ಞಾನರ್ಜನೆಗೆ ಗ್ರಂಥಾಲಯವು ಗ್ರಂಥಫಾಲಕನ ನೆರೆವಿನಿಂದ ಸಿಗುವಂತಹ ಮಾರ್ಗದರ್ಶನದ ಒಂದು ನೆರವಿನಿಂದ ತಮ್ಮ ಬುದ್ಧಿಮತ್ತೆಯನ್ನು ವೃದ್ಧಿಸಿಕೊಳ್ಳಲು ಕೊಡುಗೆಯನ್ನು ನೀಡುತ್ತದೆ.

**ಅರಿವು ಹೆಚ್ಚಿಸುವುದು**

ಈ ಗ್ರಂಥಾಲಯದಿಂದ ಸಿಗುವಂತಹ ಮಾಹಿತಿ ಕಣಜದಿಂದ ವಿದ್ಯಾರ್ಥಿಗಳು ತಮಗೆ ಇಷ್ಟವಾದಂತಹ ವಿಷಯಾನುಸಾರವಾದ ಗ್ರಂಥಗಳಾದಂತಹ ನಿಯತಕಾಲಿಕೆಗಳು ದಿನಪತ್ರಿಕೆಗಳು ಕತೆ, ಕಾದಂಬರಿಗಳು, ನಾಟಕ, ವ್ಯಕ್ತಿ ಪರಿಚಯ, ಲೇಖನಗಳು, ಹಾಗೂ ಇನ್ನಿತರ ವಿಷಯಕ್ಕೆ ಸಂಬಂಧಪಟ್ಟಂತಹ ವಿಷಯಗಳ ಬಗ್ಗೆ ಅರಿವು ಹೆಚ್ಚಿಸಿ ವಿದ್ಯಾರ್ಥಿಗಳಲ್ಲಿ ಸಮಾಜದಲ್ಲಿನ ಸಮೂಹ ಮಾಧ್ಯಮದ ವೇದಿಕೆಯ ಭಯ ನಿವಾರಿಸಲು ಈ ಗ್ರಂಥಾಲಯವು ಜನರಲ್ಲಿ ಅರಿವು ಮೂಡಿಸುತ್ತದೆ.

**ಕೊನೆಯ ಮಾತು**

ಶೈಕ್ಷಣಿಕ ಗ್ರಂಥಾಲಯವು ಕಾಲನೂಕಾಲಕ್ಕೆ ವಿವಿಧ ರೀತಿಯ ಬದಲಾವಣೆಗಳೊಂದಿಗೆ ಮಾರ್ಪಾಡಾಗಿದೆ. ಒಂದು ಕಾಲದಲ್ಲಿ ಸೀಮಿತ ವರ್ಗದವರಿಗೆ ಮಾತ್ರ ವಿದ್ಯಾಬ್ಯಾಸವಿದ್ದಂತಹ ಬಳಸುವ ಪರಿ ರೂಢಿಯಲ್ಲಿತ್ತು ಅದರೆ ಇಂದು ಎಲ್ಲಾ ವರ್ಗದವರು ಯಾವುದೆ ತರಹದ ಕಟ್ಟುಪಾಡುಗಳಿಲ್ಲದೆ, ಸದಸ್ಯತ್ವದ ನೆರವಿನಿಂದ ಬಳಸುವ ಪ್ರಕ್ರಿಯೆ ರೂಢಿಗತವಾಗಿ ಚಾಲನೆಯಲ್ಲಿದೆ. ಈ ಕಾರ್ಯಕ್ಕೆ ಸರ್ಕಾರದ ನೆರವು ಹಾಗೂ ಹಲವಾರು ಸಂಘ ಸಂಸ್ಥೆಗಳು ಕೈ ಜೋಡಿಸಿರುವುದು ಸಂತೋಷಕರವಾದ ವಿಷಯ. ಇದರಿಂದ ಎಲ್ಲಾ ಜನರಲ್ಲಿ ಓದುವ ಹವ್ಯಾಸ ಬೆಳೆಯುತ್ತದೆ ಮತ್ತು ಜ್ಞಾನದ ಪ್ರಗತಿಯನ್ನು ಸಮಾಜದಲ್ಲಿ ಹೊಂದಲು ಸಹಕಾರಿಯಾಗಿದೆ.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಗ್ರಂಥಾಲಯಗಳ ಅವಶ್ಯಕತೆ ಅನಿವಾರ್ಯ ಎಂಬಂತಾಗಿದೆ. ಗ್ರಂಥಾಲಯಗಳು ಓದುವ ಹವ್ಯಾಸವನ್ನು ಬೆಳೆಸುತ್ತವೆ ಹಾಗೂ ಜ್ಞಾನದ ಪ್ರಗತಿಯನ್ನು ಉತ್ತೇಜಿಸುತ್ತವೆ. ಹಿಂದೆ ಜ್ಞಾನಿಗಳು ಪ್ರತಿಯೊಂದು ಮಾಹಿತಿಯನ್ನು ಪಡೆಯಲು ಗ್ರಂಥಾಲಯಕ್ಕೆ ಮೊರೆಹೋಗುವ ಸಂಪ್ರದಾಯವಿತ್ತು. ಈಗಲೂ ಜ್ಞಾನವಂತರಾಗಲೂ ಇದೇ ಪ್ರಮುಖ ಮಾರ್ಗವಾಗಿದೆಯಾದರೂ ಸ್ವರೂಪ ಬದಲಾಗಿದೆಯಷ್ಟೆ. ಇವೆಲ್ಲವುದಕ್ಕೆ ಮೂಲಾಧಾರವಾಗಿ ಡಿಜಿಟಲ್ ಲೈಬ್ರರಿ, ಗೂಗಲ್, ಸಂಚರಿಸುವ ಗ್ರಂಥಾಲಯ ಮತ್ತು ಅಕ್ಷರ ಸಂಸ್ಕಾರ ನಮ್ಮ ಬದುಕಿನ ದೊಡ್ಡಸಂಗಾತಿ ಬಳಕೆಮಾಡಿಕೊಳ್ಳುವ ಮೂಲಕ ಎಲ್ಲರೂ ತಮ್ಮ ಸರ್ವತೋಮುಖ ಬೆಳವಣಿಗೆ ಕಂಡುಕೊಳ್ಳಬೇಕೆಂಬುದೇ ಗ್ರಂಥಾಲಯದ ಬಹುಮುಖ್ಯ ಆಶಯವಾಗಿದೆ.

**ಗ್ರಂಥ ಋಣ**

1. "ಗ್ರಂಥಾಲಯ ವಿಜ್ಞಾನ":ಕನ್ನಡ ವಿಶ್ವಕೋಶ, ಸಂಪುಟ 6, ಕುವೆಂಪು ಕನ್‌ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2013.
2. ಗ್ರಂಥಾಮೃತ–ಪ್ರ.ಸಂ ದೇ.ಜವರೆಗೌಡ ಸಂ.ಮಳಲಿ ವಸಂತಕುಮಾರ್ ಮತ್ತು ಪಿ.ಸದಾಶಿವ ಮೂರ್ತಿ: ಪ್ರಕಾಶಕರು ನಗರ ಗ್ರಂಥಾಲಯ ಪ್ರಾಧಿಕಾರ,ಮೈಸೂರು– 1990
3. ಭಾರತೀಯ ಗ್ರಂಥಸಂಪಾದನ ಪರಿಚಯ, ಎಸ್ ಎಂ

ಕರ್ತೃ–ಅನು: ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ
ಹರ್ಷವರ್ಧನ ಪ್ರಕಾಶನ, ಬೆಂಗಳೂರು–1968

4. https://www.ameyaworldschool.in
5. https://blog.teachmint.com/importance-of-library-in-educational-institutions